ಸುದ್ದಿ ಸಿಂಚನ

ಅಕಾಡೆಮಿ ಕೌನ್ಸಿಲ್‌ಗೆ ಡಾ. ಕೆ.ಎ. ರಾಜಣ್ಣ ನೇಮಕ



ಕಡೂರು: ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಕೆ.ಎ. ರಾಜಣ್ಣ ಅವರನ್ನು ಏ.1ರಿಂದ ಪೂರ್ವಾನ್ವಯ ವಾಗುವಂತೆ 2027 ರ ಜ.8 ರವರೆಗೆ ಅಕಾಡೆಮಿ ಕೌನ್ಸಿಲ್ ಸದಸ್ಯರನ್ನಾಗಿ(ವಿದ್ಯಾ ವಿಷಯಕ ಪರಿಷತ್) ಕುವೆಂಪು ವಿ.ವಿ.ಯ ಕುಲಪತಿ ನಾಮ ನಿರ್ದೇಶನ ಮಾಡಿ ಅಧಿಸೂಚನೆ ಹೊರಡಿಸಿದ್ದಾರೆ. ಡಾ. ರಾಜಣ್ಣ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಸುಮಾರು 30 ವರ್ಷಗಳ ಭೋಧನಾ ಅನುಭವ ಹೊಂದಿದ್ದು. 2022 ರಿಂದ ಚಿಕ್ಕಮಗಳೂರಿನ ಐಡಿಎಸ್ ಜಿ ಸರ್ಕಾರಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿ, ಪ್ರಸ್ತುತ ಕಡೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶೈಕ್ಷಣಿಕವಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಅನೇಕ ವಿಚಾರಗೋಷ್ಠಿಗಳಲ್ಲಿ ರಾಜಣ್ಣ ಪ್ರಬಂಧ ಮಂಡಿಸಿದ್ದಾರೆ.

ರಾಜ್ಯದ ಏಳಿಗೆಗೆ ದುಡಿವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ: ದೀಪಕ್



ತರೀಕೆರೆ: ರಾಜ್ಯದ ಏಳಿಗೆಗಾಗಿ ಪ್ರಾಮಾಣಿಕವಾಗಿ ದುಡಿಯುವ ಪಕ್ಷ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಎಂದು ಪಕ್ಷದ ರಾಜ್ಯಾಧ್ಯಕ್ಷ ದೀಪಕ್ ಸಿ.ಎನ್. ಹೇಳಿದ್ದಾರೆ. ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಇಡೀ ರಾಜ್ಯದಲ್ಲಿ ಯುವಕರನ್ನು ಸಂಘಟಿಸಲಾಗಿದೆ. ಆಸ್ಪತ್ರೆ, ತಾಲೂಕು ಕಚೇರಿ ಇತ್ಯಾದಿ ಕಡೆ ಯುವಕರು ಪ್ರಾಮಾಣಿಕವಾಗಿ ಹೋರಾಟ ಮಾಡಿ ಜನರಿಗೆ ನ್ಯಾಯ ದೊರಕಿಸಿಕೊಡುತ್ತಿದ್ದಾರೆ. ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಕಟ್ಟಬೇಕು. ಭಾಷೆ ನೆಲ, ಜಲದ ಬಗ್ಗೆ ಹೋರಾಡಬೇಕು. ಇಡೀ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಜನರಿಗೆ ಮಾಹಿತಿ ಕೊಡಬೇಕು.ಪೊಲೀಸ್ ಠಾಣೆ, ತಾಲೂಕು ಕಚೇರಿಗಳಲ್ಲಿ ನಮ್ಮ ಯುವಕರು ಧೈರ್ಯವಾಗಿ ಪ್ರಶ್ನೆ ಮಾಡುತ್ತಿದ್ದಾರೆ ಎಂದರು. ನಿರುದ್ಯೋಗ, ರೈತರ ಸಮಸ್ಯೆ ಕನ್ನಡ ಭಾಷಾ ಸಮಸ್ಯೆ ಹೋರಾಟ ಮಾಡಲಾಗುತ್ತಿದೆ. ಪಕ್ಷಕ್ಕೆ ರಾಜ್ಯದಲ್ಲಿ ಒಳ್ಳೆಯ ಸ್ಪಂದನೆ ಸಿಕ್ಕಿದೆ. ಎಲ್ಲ ಕಡೆ ಪ್ರವಾಸ ಮಾಡುತ್ತಿದ್ದೇವೆ ಎಂದು ಹೇಳಿದರು. ರಾಜ್ಯ ಉಪಾಧ್ಯಕ್ಷ ಮಂಜುನಾಥ್ ಎಸ್. ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ಮಾಧ್ಯಮ ಸಂಯೋಜಕ ಎಲ್.ಜೀವನ್, ತಾಲೂಕು ಅಧ್ಯಕ್ಷ ಪ್ರತಾಪ್ ಎಸ್.ವಿ, ತಾಲೂಕು ಉಪಾಧ್ಯಕ್ಷ ಪ್ರದೀಪ್, ತಾಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ್, ರೈತ ಮುಖಂಡರಾದ ಹಳಿಯೂರು ಸೋಮಶೇಖರಯ್ಯ ಮತ್ತಿತರರು ಭಾಗವಹಿಸಿದ್ದರು.

ಮತ ಎಣಿಕೆ ಫಲಿತಾಂಶ ನ್ಯಾಯಾಲಯಕ್ಕೆ ಸಲ್ಲಿಕೆ

ಬಿಜೆಪಿಯ ಡಿ.ಎನ್. ಜೀವರಾಜ್‌ಗೆ 52 ಮತಗಳ ಮುನ್ನಡೆ | ಒಟ್ಟು 1,822 ಅಂಚೆ ಮತ ಎಣಿಕೆಯಲ್ಲಿ 255 ಮತ ಅಸಿಂಧು

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ 2023ರಲ್ಲಿ ಹಾಲಿ ಕಾಂಗ್ರೆಸ್ ಶಾಸಕ ಟಿ.ಡಿ.ರಾಜೇಗೌಡ ಪಡೆದ ಮತಗಳ ಪೈಕಿ ಬರೋಬ್ಬರಿ 255 ಮತ ಅಸಿಂಧು ಎಂದು ಪರಿಗಣಿಸಲಾಗಿದೆ. ಹೀಗಾಗಿ, ಪರಾಜಿತ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಇದೀಗ 52 ಮತಗಳ ಮುನ್ನಡೆ ಸಾಧಿಸಲಾಗಿದೆ.

ಹೈಕೋರ್ಟ್ ಆದೇಶದ ಮೇರೆಗೆ ಅಂಚೆ ಮತ ಪತ್ರಗಳ ಮರು ಎಣಿಕೆ ಕಾರ್ಯ ನಡೆಸಿದ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿ ಕಾರಿಗಳು ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಮತ್ತು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಕಾರಣ ಅಧಿಕೃತವಾಗಿ ಫಲಿತಾಂಶ ಪ್ರಕಟಿಸಿಲ್ಲ.

ಎಣಿಕೆ ಕಾರ್ಯದ ಶುರುನಿಂದ ಅಂತ್ಯದವರೆಗೂ ಹಲವು ಗೊಂದಲ, ಹೈಡ್ರಾಮಕ್ಕೆ ಮಾತ್ರ ಶೃಂಗೇರಿ ವಿಧಾನಸಭಾ ಕ್ಷೇತ್ರ ಅಂಚೆ ಮತ ಮರು ಎಣಿಕೆ ಸಾಕ್ಷಿ ಆಯಿತು.

ಟಿ.ಡಿ,ರಾಜೇಗೌಡ 2023ರ ಮತ ಎಣಿಕೆ ವೇಳೆ ಇವಿಎಂ ಮತಗಳ ಪೈಕಿ 324 ಮತದ ಮುನ್ನಡೆ ಸಾಧಿಸಿದ್ದರು. ಆದರೆ, ಅಂಚೆ ಮತ ಪತ್ರದಲ್ಲಿ ಜೀವರಾಜ್‌ಗಿಂತ 123 ಹಿನ್ನಡೆ ಉಂಟಾಗಿದ್ದರೂ ಒಟ್ಟಾರೆ 201 ಮತದಿಂದ ಗೆಲುವು ಸಾಧಿಸಿದ್ದರು.

ಅಂಚೆ ಮತ ಪತ್ರದ ಎಣಿಕೆ ಪ್ರಶ್ನಿಸಿ ಜೀವರಾಜ್ ನ್ಯಾಯಾಲಯದ ಮೊರೆ ಹೋಗಿದ್ದರು. ಅಂತಿಮವಾಗಿ ನ್ಯಾಯಾಲಯ ಏ.6 ರಂದು ಅಂಚೆ ಮತ ಮರು ಎಣಿಕೆಗೆ ಆದೇಶಿಸಿತ್ತು. ಅದರಂತೆ ಶನಿವಾರ ನಡೆಸಲಾದ ಮರು ಎಣಿಕೆಯಲ್ಲಿ ಜೀವರಾಜ್ 690, ರಾಜೇಗೌಡ 314 ಅಂಚೆ ಮತ ಮಾತ್ರ ಪಡೆದುಕೊಂಡಿದ್ದಾರೆ.

ಅಂಕಿ ಅಂಶ	
ಒಟ್ಟು ಅಂಚೆ ಮತ	1,822
ತಿರಸ್ಕೃತ ಮತ ಸಂಖ್ಯೆ	267

2023ರಲ್ಲಿ ಪಡೆದ ಮತಗಳಿಗೆ ಹೋಲಿಸಿದರೆ, ಜೀವರಾಜ್‌ಗೆ 2 ಮತ ಕಡಿಮೆ ಆಗಿವೆ, ರಾಜೇಗೌಡರಿಗೆ ಬರೋಬ್ಬರಿ 255 ಮತ ಕಡಿಮೆ ಆಗಿದೆ. 2023ರಲ್ಲಿ ಪಡೆದ ಅಂಚೆ ಮತ 255 ಮತ ಮರು ಎಣಿಕೆಯಲ್ಲಿ ಅಸಿಂಧು ಎಂದು ಪರಿಗಣಿಸಿರುವುದು ರಾಜೇಗೌಡ ಹಿನ್ನಡೆಗೆ ಮುಖ್ಯ ಕಾರಣ. ಆಗ ಸಿಂಧು ಎಂದು ಪರಿಗಣಿಸಿದ ಮತ ಪತ್ರದಲ್ಲಿ ಇದೀಗ ರಾಜೇಗೌಡ ಸೇರಿದಂತೆ ಮತ್ತೊಬ್ಬ ಅಭ್ಯರ್ಥಿಗೆ ಮತ ಚಲಾವಣೆ ಆಗಿದೆ. ಇಬ್ಬರು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗೆ ಮತ ಚಲಾವಣೆ ಆಗಿರುವುದರಿಂದ ಆ ಮತವನ್ನು ಅಸಿಂಧು ಎಂದು ಪರಿಗಣಿಸಲಾಗಿದೆ. ಹೀಗಾಗಿ, ರಾಜೇಗೌಡ ಅವರಿಗೆ 255 ಮತ ಕಡಿಮೆ ಆಗಿದೆ.



ಬಿಜೆಪಿಯ ಕಾರ್ಯಕರ್ತರು ಜೀವರಾಜ್ ಮುನ್ನಡೆ ಗಳಿಸಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆ ಶನಿವಾರ ತಡ ರಾತ್ರಿಯೇ ಭರ್ಜರಿ ಸಂಭ್ರಮಾಚರಣೆ ನಡೆಸಿದರು.

ಅಂಚೆ ಮತದ ವಿವರ			
ಅಭ್ಯರ್ಥಿ	2023	ಮರು ಎಣಿಕೆ	ವ್ಯತ್ಯಾಸ
ಜೀವರಾಜ್	692	690	02(ಕಡಿಮೆ)
ರಾಜೇಗೌಡ	569	314	255(ಕಡಿಮೆ)

ಶನಿವಾರ 7.30ರ ಬೆಳಗ್ಗೆ ಸ್ಟ್ರಾಂಗ್ ರೂಂನಿಂದ ಮತಪತ್ರ ತೆರಲು ಹೋದಾಗಲೇ ಮತಪತ್ರ ಸಂಗ್ರಹಿಸಿದ್ದ ಬಾಕ್ಸ್‌ಗಳ ಬೀಗ ಮುರಿಯಲಾಗಿದೆ ಎಂಬ ಆರೋಪದೊಂದಿಗೆ ಶುರುವಾದ ಗೊಂದಲ ಎಣಿಕಾ ಕಾರ್ಯ ಮುಕ್ತಾಯದವರೆಗೂ ಮುಂದುವರಿಯಿತು.

ಮತ ವ್ಯತ್ಯಾಸದ ಕುರಿತು ವರದಿ: ಎಣಿಕೆ ಪ್ರಕ್ರಿಯೆ ಮುಗಿದ ಬಳಿಕ ಮಾಹಿತಿ ನೀಡಿದ ಚುನಾವಣಾಧಿಕಾರಿ ಗೌರವ ಕುಮಾರ್ ಶೆಟ್ಟಿ, '2023ರ ಮತ ಎಣಿಕೆ ವೇಳೆ ಚಲಾವಣೆಯಾಗಿದ್ದ 1,822 ಅಂಚೆ ಮತಗಳ ಪೈಕಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರಿಗೆ 692 ಮತಗಳು, ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರಿಗೆ 569 ಮತಗಳು ಲಭಿಸಿದ್ದವು. ಆದರೆ, ಶನಿವಾರ ನಡೆದ ಪರಿಶೀಲನೆ ಮತ್ತು ಮರು ಎಣಿಕೆ ಬಳಿಕ ಜೀವರಾಜ್ ಅವರ ಮತಗಳು 690 ಆಗಿದ್ದರೆ. ರಾಜೇಗೌಡ ಅವರ ಮತಗಳು 314ಕ್ಕೆ ಇಳಿದಿವೆ. ರಾಜೇಗೌಡ ಅವರಿಗೆ 255 ಮತಗಳು ಕಡಿಮೆಯಾಗಿದೆ ಎಂದು ಹೇಳಿದರು.

ಹೈಕೋರ್ಟ್ ನಿರ್ದೇಶನದಂತೆ ಪರಿಶೀಲನೆ ಮತ್ತು ಮರುಎಣಿಕೆ ಪ್ರಕ್ರಿಯೆ ನಡೆಸಿ ಮತಪತ್ರಗಳನ್ನು ಮತ್ತೆ ಸ್ಟ್ರಾಂಗ್ ರೂಮಿನಲ್ಲಿ ಇರಿಸಿ ಸೀಲ್ ಮಾಡಲಾಗಿದೆ. ಮರು ಎಣಿಕೆ ನಂತರ ಕಂಡು ಬಂದ ಮತ ವ್ಯತ್ಯಾಸದ ಕುರಿತು ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಲಾಗಿದೆ ಎಂದು ವಿವರಿಸಿದರು.

ಬರೋಬ್ಬರಿ 16 ತಾಸು ಮತ ಎಣಿಕೆ

ಹೈಕೋರ್ಟ್ ಆದೇಶದಂತೆ ಮೇ 2ರ ಶನಿವಾರ ಜಿಲ್ಲಾ ಚುನಾವಣಾಧಿಕಾರಿ ಶೃಂಗೇರಿ ವಿಧಾನಸಭಾ ಕ್ಷೇತ್ರದ 1,822 ಅಂಚೆ ಮತ ಪತ್ರ ಪರಿಶೀಲನೆ ಮತ್ತು ಮರು ಎಣಿಕೆ ನಡೆಸಿದರು. ಶನಿವಾರ ಬೆಳಗ್ಗೆ 7.30ಕ್ಕೆ ಸ್ಟ್ರಾಂಗ್ ರೂಂ ಓಪನ್ ಮಾಡಿ, 8.30ರ ಸುಮಾರಿಗೆ ಎಣಿಕಾ ಕೇಂದ್ರಕ್ಕೆ ಮತ ಪತ್ರ ತರಲಾಯಿತು. 9 ಕ್ಕೆ ಮತ ಎಣಿಕೆ ಆರಂಭವಾಯಿತು. ನಿರಂತರವಾಗಿ ಶನಿವಾರ ತಡರಾತ್ರಿ 1.30ರ ಸುಮಾರಿಗೆ ಎಣಿಕಾ ಕಾರ್ಯ ಮುಕ್ತಾಯವಾಗಿ, ರಾತ್ರಿ 2 ಗಂಟೆ ಸುಮಾರಿಗೆ ಅಂಚೆ ಮತಪತ್ರಗಳನ್ನು ಸ್ಟ್ರಾಂಗ್ ರೂಂಗೆ ಸೇರಿಸಲಾಯಿತು.

ಸ್ಟ್ರಾಂಗ್ ರೂಂ ವ್ಯವಸ್ಥೆ ನೋಡಿದ ತಕ್ಷಣ ಮತ ಟ್ಯಾಂಪರಿಂಗ್ ಆಗಿದೆ ಎಂದು ಮತ ಎಣಿಕೆ ಆರಂಭಕ್ಕೂ ಮುನ್ನವೇ ಹೇಳಿದ್ದೇವು. 2023ರಲ್ಲಿ ಸಿಂಧು ಆಗಿದ್ದ ನನಗೆ ಚಲಾವಣೆಯಾಗಿದ್ದ ಮತ ಪತ್ರಗಳ ಮೇಲೆ ಹೆಚ್ಚುವರಿ ಗುರುತುಗಳು ಕಾಣಿಸಿವೆ. ಬೇರೆಯವರ ಹೆಸರಿನ ಮುಂದೆ ಕೂಡ ಗೆರೆ ಎಳೆಯಲಾಗಿದೆ. ಇದು ಹೇಗೆ ಆಗಿದೆ ಎಂಬುದು ಗೊತ್ತಿಲ್ಲ. ಬೇರೆ ಪೆನ್ ಸಹ ಬಳಕೆ ಆಗಿರುವುದು ಮತ ಪತ್ರದಲ್ಲಿ ಕಾಣುತ್ತಿದೆ. ಸೀಲ್ ಕಿತ್ತು ಬಿದ್ದಿದೆ. ಜೀವರಾಜ್ ಹಾಗೂ ಅವರಿಗೆ ಬೆಂಬಲ ನೀಡಿದವರ ವಿರುದ್ಧ ಮತಗಳ ಟ್ಯಾಂಪರಿಂಗ್ ದೂರು ದಾಖಲಿಸುತ್ತೇನೆ. 2023ರ ಮತ ಎಣಿಕೆ ವೇಳೆ ಎಲ್ಲ ಪಕ್ಷಗಳ ಏಜೆಂಟ್‌ಗಳ ಸಮ್ಮುಖದಲ್ಲಿ ಈ ಮತಪತ್ರಗಳನ್ನು ಸಿಂಧು ಎಂದು ಪರಿಗಣಿಸಲಾಗಿತ್ತು. ಈಗ ಅದೇ ಮತಗಳನ್ನು ಅಸಿಂಧು ಎಂದು ಘೋಷಿಸಲಾಗಿದೆ.

• **ಟಿ.ಡಿ,ರಾಜೇಗೌಡ**
ಹಾಲಿ ಕಾಂಗ್ರೆಸ್ ಶಾಸಕ

ಸ್ಟ್ರಾಂಗ್ ರೂಂನಿಂದಲೇ ಹಲವು ಗೊಂದಲ ಶುರುವಾಗಿದೆ. ಯಾಕೆ ಸ್ಟ್ರಾಂಗ್ ರೂಂ ಆ ರೀತಿ ನಿರ್ವಹಣೆ ಮಾಡಲಾಗಿದೆ ಎಂದು ಗೊತ್ತಿಲ್ಲ. ತಿರಸ್ಕೃತ ಮತ ಪರಿಶೀಲನೆ ಹಾಗೂ ಮರು ಎಣಿಕೆಯಲ್ಲಿ ಬಹುಮತ ಸಿಕ್ಕಿದೆ. ಚುನಾವಣಾಧಿಕಾರಿ ಫಲಿತಾಂಶ ಘೋಷಣೆ ಮಾಡಿ ಪ್ರಮಾಣ ಪತ್ರ ನೀಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ಆದರೆ, ಪ್ರಮಾಣಪತ್ರ ನೀಡಿಲ್ಲ. ಅಧಿಕಾರಿಗಳು ಏನು ಕ್ರಮ ಕೈಗೊಳ್ಳುತ್ತಾರೆ ಎಂಬುದು ಗೊತ್ತಿಲ್ಲ, ಕಾಯುತ್ತೇನೆ. ನನ್ನ ಹೋರಾಟಕ್ಕೆ ಗೆಲುವು ಸಿಕ್ಕಿದೆ. ಸೋಲು ಉಂಟಾದ ತಕ್ಷಣ ಟ್ಯಾಂಪರಿಂಗ್ ಆಗಿದೆ ಎನ್ನುವುದು, ಗೆಲುವು ಸಿಕ್ಕಾಗ ಜನಾಭಿಪ್ರಾಯ, ಸಂವಿಧಾನದ ಗೆಲುವು ಎನ್ನುವುದು ಸರಿಯಲ್ಲ.

• **ಜೀವರಾಜ್**
ಬಿಜೆಪಿ ಅಭ್ಯರ್ಥಿ

2023ರ ಮತ ಎಣಿಕೆ ವೇಳೆ ಆಗಿನ ಚುನಾವಣಾಧಿಕಾರಿ ಎಲ್ಲ ಪಕ್ಷಗಳ ಏಜೆಂಟ್‌ಗಳ ಸಮ್ಮುಖದಲ್ಲೇ ಅಂಚೆ ಮತಗಳನ್ನು ಎಣಿಸಿದ್ದರು. ಆದರೆ, ಈಗ ರಾಜೇಗೌಡ ಅವರಿಗೆ ಬಂದ ಮತಪತ್ರಗಳ ಕಟ್ಟುಗಳಷ್ಟೇ ಅಮಾನ್ಯ ಎಂದು ಪರಿಗಣಿಸಲಾಗಿದೆ. 2023ರ ಎಣಿಕೆಯಲ್ಲಿ ಇವೆಲ್ಲವೂ ಮಾನ್ಯ ಮತಗಳಾಗಿದ್ದವು. ಈಗ ಮತಪತ್ರಗಳಲ್ಲಿ ಮತ್ತೊಬ್ಬ ಅಭ್ಯರ್ಥಿಗೂ ಗೆರೆ ಎಳೆದಿರುವುದು ಕಾಣಿಸುತ್ತಿವೆ. ನಮ್ಮ ಕಣ್ಣುಗಳನ್ನು ನಾವೇ ನಂಬದ ಸ್ಥಿತಿ ಎದುರಾಗಿದೆ.

• **ಸುಧೀರ್‌ಕುಮಾರ್ ಮುರೊಳ್ಳಿ** ವಕೀಲ,
ಕಾಂಗ್ರೆಸ್ ಅಭ್ಯರ್ಥಿ ಬೂತ್ ಏಜೆಂಟ್

ಹೈಕೋರ್ಟ್ ಸೂಚನೆಯಂತೆ ಅಂಚೆ ಮತ ಪತ್ರ ಮರು ಎಣಿಕೆ ಮಾಡಲಾಗಿದೆ. ಇವಿಎಂ ಮತ್ತು ಅಂಚೆ ಮತ ಎರಡನ್ನೂ ಕೂಡಿಸಿ ಫಲಿತಾಂಶ ಪ್ರಕಟಿಸಬೇಕಿದೆ. ಆದರೆ, ಈಗ ಅಂಚೆ ಮತ ಮಾತ್ರ ಮರು ಎಣಿಕೆ ಮಾಡಲಾಗಿದೆ. ಹೀಗಾಗಿ, ಫಲಿತಾಂಶ ಪ್ರಕಟಿಸಲು ಅವಕಾಶವಿಲ್ಲ. ಎಲ್ಲವನ್ನೂ ಚುನಾವಣೆ ಆಯೋಗಕ್ಕೆ ಮತ್ತೆ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡುತ್ತೇನೆ.

• **ಗೌರವ್ ಕುಮಾರ್‌ಶೆಟ್ಟಿ**
ಚುನಾವಣಾಧಿಕಾರಿ

279 ತಿರಸ್ಕೃತ ಅಂಚೆ ಮತ ಪೈಕಿ 12 ನಾಪತ್ತೆ

ಕೋರ್ಟ್ ತಿರಸ್ಕೃತ ಪುನರ್ ಪರಿಶೀಲನೆ ಮಾಡಿ, ಮಾನ್ಯಗೊಂಡ 1,543 ಮತಗಳ ಮರು ಎಣಿಕೆ ಮಾಡಿ ಎಂದು ಸೂಚಿಸಿತ್ತು. ತಿರಸ್ಕೃತಗೊಂಡ 279 ಮತಗಳಲ್ಲಿ 12 ಮತ ಲಭ್ಯವಾಗಿಲ್ಲ. ಸಿಬ್ಬಂದಿ ಸಾಕಷ್ಟು ಹುಡುಕಾಟ ನಡೆಸಿದರೂ ಸಿಕ್ಕಿಲ್ಲ. ಆ 12 ಮತ ಎಲ್ಲಿ ಹೋಗಿವೆ ಎಂಬುದು ಅಧಿಕಾರಿಗಳಿಗೆ ಯಕ್ಷ ಪ್ರಶ್ನೆಯಾಗಿದೆ. ಕೇವಲ 267 ತಿರಸ್ಕೃತ ಮತ ಸಿಕ್ಕಿವೆ. ಉಳಿದಂತೆ 1,543 ಮತ ಮರು ಎಣಿಕೆ ಮಾಡಲಾಗಿದೆ ಎಂದು ಗೌರವ್ ಕುಮಾರ್‌ಶೆಟ್ಟಿ ಮಾಹಿತಿ ನೀಡಿದ್ದಾರೆ.

ಕೊಪ್ಪದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಸಂಭ್ರಮಾಚರಣೆ



ಡಿ.ಎನ್. ಜೀವರಾಜ್ ಅಂಚೆ ಮತದ ಮರು ಎಣಿಕೆಯಲ್ಲಿ 56 ಮತಗಳ ಅಂತರದಲ್ಲಿ ಮುನ್ನಡೆ ಸಾಧಿಸಿದ ಪ್ರಯುಕ್ತ ಕೊಪ್ಪ ಪಟ್ಟಣದ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಮೆರವಣಿಗೆ ನಡೆಸಿ ಜೈಕಾರ ಹಾಕಿ ತಡರಾತ್ರಿಯಾದರೂ ಸಹ ಸಂಭ್ರಮಾಚರಣೆ ಮಾಡಿದರು. ಈ ಸಂದರ್ಭದಲ್ಲಿ ಕೊಪ್ಪ ನಗರ ಘಟಕದ ಬಿಜೆಪಿ ಅಧ್ಯಕ್ಷ ಎ.ದಿವಾಕರ್, ಪ್ರಧಾನ ಕಾರ್ಯದರ್ಶಿ ಸಿ.ಎಚ್. ಪ್ರಕಾಶ್, ಕಸಾಬ ಹೋಬಳಿ ಅಧ್ಯಕ್ಷ ಸಂದೇಶ್, ಮುಖಂಡರಾದ ಪ್ರವೀಣ್, ದೀಕ್ಷಿತ್ ಗೌಡ, ರೀತೇಶ್ ಗೌಡ, ರಾಘವೇಂದ್ರ, ಜಗದೀಶ್, ವೆಂಕಟೇಶ್, ಉದಯಕುಮಾರ್‌ಜೈನ್ ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

ಮತಗಳ ಟ್ಯಾಂಪರಿಂಗ್: ಕಾಂಗ್ರೆಸ್‌ನಿಂದ ದೂರು

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳನ್ನು ತಿದ್ದಲಾಗಿದೆ (ಟ್ಯಾಂಪರಿಂಗ್)ಎಂದು ಆರೋಪಿಸಿ ಬಿಜೆಪಿ ಅಭ್ಯರ್ಥಿ ಜೀವರಾಜ್, ಅಂದಿನ ಚುನಾವಣಾಧಿಕಾರಿ ವೇದಮೂರ್ತಿ ಹಾಗೂ ಅಂದಿನ ಜಿಲ್ಲಾ ಚುನಾವಣಾಧಿಕಾರಿ ರಮೇಶ್ ವಿರುದ್ಧ ಕಾಂಗ್ರೆಸ್ ಮುಖಂಡ ಸುಧೀರ್‌ಕುಮಾರ್‌ಮುರೊಳ್ಳಿ ಚಿಕ್ಕಮಗಳೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಶನಿವಾರ ತಡರಾತ್ರಿವರೆಗೂ ನಡೆದ ಅಂಚೆ ಮತಗಳ ಎಣಿಕೆ ಬಳಿಕ ನೇರವಾಗಿ ನಗರ ಠಾಣೆಗೆ ಆಗಮಿಸಿ ಅಂಚೆ ಮತಗಳಲ್ಲಿ ಟ್ಯಾಂಪರಿಂಗ್ ನಡೆದಿದೆ ಎಂದು ದೂರು ನೀಡಿದ್ದು, ಪೊಲೀಸರು ದೂರು ದಾಖಲಿಸಿದ್ದಾರೆ. ಮಾಜಿ ಎಂಎಲ್‌ಸಿ ಗಾಯತ್ರಿ ಶಾಂತೇಗೌಡ ಸುಧೀರ್ ಅವರಿಗೆ ಸಾಥ್ ನೀಡಿದರು. ಟಿ.ಡಿ.ರಾಜೇಗೌಡ ಮತ ಎಣಿಕೆ ಕೇಂದ್ರದಿಂದ ನೇರ ಪೊಲೀಸ್ ಠಾಣೆಗೆ ಆಗಮಿಸಿದರು.

2023ರ ಮತ ಎಣಿಕೆಯಲ್ಲಿ ಟಿ.ಡಿ.ರಾಜೇಗೌಡರಿಗೆ ಹಾಕಿದ್ದ 257 ಅಂಚೆ ಮತ ಪತ್ರಗಳಲ್ಲಿ ಈ ಬಾರಿ ಮಲ್ಟಿಪಲ್ ಎಂಟ್ರಿ ಗೋಚರಿಸಿದೆ. ಇದರಿಂದ ಚುನಾವಣಾ ಅಧಿಕಾರಿ ಗೌರವ ಕುಮಾರ್ ಶೆಟ್ಟಿ ಆ ಮತಗಳನ್ನು ಅಸಿಂಧು ಗೊಳಿಸಿದ್ದಾರೆ. ರಾಜೇಗೌಡರಿಗೆ ಸಂದಾಯವಾಗಿದ್ದ ಈ ಮತಗಳನ್ನು ಅಮಾನ್ಯಗೊಳಿಸಿದ್ದಾರೆ. ಇವರಿಗೆ ಬಂದಿದ್ದ ಒಂದು ಕಟ್ಟಿನ 170 ಮತಗಳನ್ನು ತಿದ್ದುಪಡಿ ಮಾಡಿದ ಅನುಮಾನವಿದೆ. 2023ರ ಮತ ಎಣಿಕೆ ಬಳಿಕ ಅಂದಿನ ಚುನಾವಣಾ ಅಧಿಕಾರಿ ವೇದಮೂರ್ತಿ, ಬಿಜೆಪಿ ಅಭ್ಯರ್ಥಿ ಜೀವರಾಜ್, ಅಂದಿನ ಜಿಲ್ಲಾಧಿಕಾರಿ ರಮೇಶ್ ಇತರರು ಮತಪೆಟ್ಟಿಗೆ ಸೀಲುಗಳನ್ನು ತೆರೆದು ಅಕ್ರಮ ಎಸಗಿರುವ ಅನುಮಾನವಿದೆ. ಎಣಿಕೆ ದಿನ ಬೆಳಗ್ಗೆ 7 ಗಂಟೆಗೆ ಆಕ್ಷೇಪಣೆ ಸಲ್ಲಿಸಿದ್ದೇವ ಇವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲು ದೂರಿನಲ್ಲಿ ಸುಧೀರ್‌ಕುಮಾರ್ ಒತ್ತಾಯಿಸಿದ್ದಾರೆ.



ಶಾರದಾಂಬೆ ದರ್ಶನ ಪಡೆದ ಡಿ.ಎನ್.ಜೀವರಾಜ್



ಶೃಂಗೇರಿ ಶ್ರೀ ಶಾರದಾ ಪೀಠಕ್ಕೆ ಭಾನುವಾರ ಡಿ.ಎನ್.ಜೀವರಾಜ್ ಭೇಟಿ ನೀಡಿದ್ದರು.

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಮಾಜಿ ಸಚಿವ ಡಿ.ಎನ್.ಜೀವರಾಜ್ ಭಾನುವಾರ ಮಧ್ಯಾಹ್ನ ಶೃಂಗೇರಿ ಶಾರದಾ ಪೀಠಕ್ಕೆ ಭೇಟಿ ನೀಡಿ ಶಾರದಾಂಬೆ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಶನಿವಾರದ ನಡೆದ ಅಂಚೆ ಮತಗಳ ಎಣಿಕೆ ನಡೆದ ಹಿನ್ನೆಲೆಯಲ್ಲಿ ದೇಗುಲಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ ಇದು ಸತ್ಯಕ್ಕೆ ಸಂದ ಜಯ. ಸತತ ಮೂರು ವರ್ಷಗಳ ಕಾನೂನು ಹೋರಾಟ ಮಾಡಿದ್ದೇನೆ. ನ್ಯಾಯಕ್ಕೆ ಜಯ ಸಿಕ್ಕಿದೆ. ನಾನು ಶೃಂಗೇರಿ ಮಠದ ಭಕ್ತ. ನನ್ನ ಸೋಲು ಗೆಲುವು ಎರಡನ್ನು ತಾಯಿಗೆ ಅರ್ಪಿಸಿದ್ದೇನೆ ಎಂದರು.

2023 ರ ಮೇ 23 ರ ಸಂಜೆ ನಾವು ಮರು ಮತಎಣಿಕೆಗೆ ಅರ್ಜಿ ಸಲ್ಲಿಸಿದ್ದೆವು. ಆದರೆ ಉತ್ತರವೇ ವೀಡಿಲ್ಲ. ನಮ್ಮೆದುರೇ ಅವರಿಗೆ ಪ್ರಮಾಣ ಪತ್ರ ನೀಡಿದರು. 2 ದಿನಗಳ ನಂತರ ಅಂಚೆಯಲ್ಲಿ ಉತ್ತರ ಕಳುಹಿಸಿದರು. ಅವರು ಎರಡು ಬಾರಿ ಸುಪ್ರಿಂ ಕೋರ್ಟಿಗೆ ಹೋದರು. ಹೈಕೋರ್ಟಿಗೂ ಹೋದರು. ವಾಸ್ತವಿಕತೆ ಗೊತ್ತಿಲ್ಲ. ಇದು ನ್ಯಾಯಾಲಯದ ಆದೇಶ. ಮತ ಎಣಿಕೆಗೂ ತಡೆವೊಡ್ಡಿ ಗಲಾಟೆ ಮಾಡಿದರು. ಫಲಿತಾಂಶ ಬರುವ ಮೊದಲೇ ವಿಜಯೋತ್ಸವ ಮಾಡಲು ಹೊರಟರು. ಅಧಿಕಾರಿಗಳಿಗೆ ಮಾನಸಿಕ ಹಿಂಸೆ ನೀಡಿದರು ಎಂದರು.

ಅವರು ಗೆದ್ದರೆ ಸತ್ಯ ಮೇವಾ ಜಯತೆ, ಸಂವಿಧಾನಕ್ಕೆ ಜಯ. ಆದರೆ ಬಿಜೆಪಿ ಗೆದ್ದರೆ ಮೊಸದ ಜಯ. ಇದು ಯಾವ ನ್ಯಾಯ ಎಂದ ಅವರು. ರಾಜ್ಯದಲ್ಲಿ ದೇಶದಲ್ಲಿ ಈ ರೀತಿ ಕಡಿಮೆ ಅಂತರದಿಂದ ಸೋತ ಅಭ್ಯರ್ಥಿಗಳ ಅರ್ಜಿ ಸ್ವೀಕರಿಸಿ ಅಂಚೆ ಮರು ಎಣಿಕೆ ಮಾಡಬೇಕು. ಅವರಿಗೆ ನ್ಯಾ ಸಿಗಬೇಕು ಎಂದರು.ಈ ಸಂದರ್ಭದಲ್ಲಿ ಸ್ಥಳೀಯ ಬಿಜೆಪಿ ಮುಖಂಡರು, ಕಾರ್ಯಕರ್ತರು ಇದ್ದರು.

ಕನ್ನಡಪ್ರಭ
ಸೋಮವಾರ 4.05.2026

ಗರಿಷ್ಠ 31 c | ಕನಿಷ್ಠ 20 c

ಸುದ್ದಿ ಸಿಂಚನ

ಕಡೂರು: ಸಮೃದ್ಧ ಮಳೆಗಾಗಿ ದೇವರಿಗೆ ಮೊರೆ

ಕಡೂರು: ತಾಲೂಕಿನಲ್ಲಿ ಸಮೃದ್ಧಿ ಮಳೆಯಾಗಲೆಂದು ಪ್ರಾರ್ಥಿಸಿ ಮಳೆ ದೇವರೆಂದೆ ಖ್ಯಾತಿ ಪಡೆದಿರುವ ಶೃಂಗೇರಿ ತಾಲೂಕಿನ ಕಿಗ್ಗಾದ ಋಷ್ಯ ಶೃಂಗೇಶ್ವರನಿಗೆ ಚಿಕ್ಕಪಟ್ಟಣಗೆರೆ ಗ್ರಾಮಸ್ಥರು ಶನಿವಾರ ಶತ ರುದ್ರಾಭಿಷೇಕ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಈಗಾಗಲೇ ಸುಡುಬಿಸಿಲಿನಿಂದ ತತ್ತರಿಸುತ್ತಿರುವ ಜನತೆಗೆ ಮಳೆಗಾಗಿ ಕಾಯುತ್ತಿದ್ದು, ಕೆರೆಕಟ್ಟೆಗಳಲ್ಲಿನ ಅಂತರ್ಜಲ ಮಟ್ಟ ಕುಸಿಯುತ್ತಿದೆ. ರೈತ ವರ್ಗಕ್ಕೆ ಉತ್ತಮ ಮಳೆ-ಬೆಳೆ ಕರುಣಿಸುವಂತೆ ಪ್ರಾರ್ಥಿಸಲಾಯಿತು ಎಂದು ಗ್ರಾಮದ ಮುಖಂಡ ಚಿಕ್ಕಪಟ್ಟಣಗೆರೆ ನಾಗರಾಜ್ ತಿಳಿಸಿದರು. ಈ ಸಂದರ್ಭದಲ್ಲಿ ಶಿವಮೂರ್ತಿ, ಸಿ.ಆರ್. ನಾಗರಾಜ್, ಸಿ.ಎಸ್. ರಮೇಶ್, ಶ್ರೀಧರ್, ವಿಜಯ್‌ಕುಮಾರ್, ಜಗದೀಶ್ ಇದ್ದರು.

ಶೃಂಗೇರಿ: ಕಾಲಮಿತಿ ಯಕ್ಷಗಾನ ಪ್ರದರ್ಶನ

ಶೃಂಗೇರಿ: ಪಟ್ಟಣದ ಮಾನಗಾರು ಜ್ಞಾನಭಾರತೀ ಶಾಲೆ ಆಟದ ಮೈದಾನದಲ್ಲಿ ಯಕ್ಷಗಾನ ಶೃಂಗೇರಿ ಇವರ ಸಹಯೋಗದಲ್ಲಿ ಶ್ರೀ ಪೆರ್ಡೂರು ಮೇಳದವರಿಂದ ಕಾಲಮಿತಿ ಪೌರಾಣಿಕ ಯಕ್ಷಗಾನ ಪ್ರಸಂಗ ಮೇ 4 ರ ಸೋಮವಾರ ನಡೆಯಲಿದೆ. ಸಂಜೆ 7 ಗಂಟೆಯಿಂದ ಯಕ್ಷಗಾನ ಪ್ರದರ್ಶನ ಆರಂಭಗೊಳ್ಳಲಿದ್ದು ಪ್ರಸಿದ್ಧ ಯಕ್ಷಗಾನ ಭಾಗವತ ರಾಘವೇಂದ್ರ ಆಚಾರ್ಯ ಜನ್ಸಾಲೆ ಹಾಗೂ ಪ್ರಸನ್ನ ಭಟ್ ಭಾಳ್ಕಲ್ ರಂಗನಡೆಯೊಂದಿಗೆ ಪೌಂಡ್ರಕ ವಾಸುದೇವ (ಹಾಸ್ಯಪ್ರಧಾನ), ಲಂಕಾ ದಹನ (ಭಾವ ಪ್ರಧಾನ), ಕಾರ್ತವೀರ್ಯ(ಶೌರ್ಯಪ್ರಧಾನ) ಎಂಬ ಮೂರು ಯಕ್ಷಗಾನ ಪ್ರಸಂಗಗಳು ಪ್ರದರ್ಶನಗೊಳ್ಳಲಿದೆ.

ಕೊಪ್ಪ ವಕೀಲರ ಸಂಘಕ್ಕೆ ಆದರ್ಶ ಅಧ್ಯಕ್ಷ

ಕೊಪ್ಪ: ವಕೀಲರ ಸಂಘಕ್ಕೆ ನಡೆದ ಪದಾಧಿಕಾರಿಗಳ ಅಯ್ಕೆ ಪ್ರಕ್ರಿಯೆಯಲ್ಲಿ ಸಂಘದ ನೂತನ ಆಧ್ಯಕ್ಷರಾಗಿ



ಆದರ್ಶ ಎಚ್.ಎಸ್. ಆಯ್ಕೆಯಾಗಿದ್ದಾರೆ. ಉಳಿದಂತೆ ಕಾರ್ಯದರ್ಶಿ ಸುಚೇತ ಭಂಡಾರಿ, ಸಹ ಕಾರ್ಯದರ್ಶಿ ನಾಗೇಂದ್ರ ಪ್ರಸಾದ್, ಖಜಾಂಚಿ ಮಮತ ಆಯ್ಕೆಯಾದರು ನೂತನವಾಗಿ ಅಯ್ಕೆಯಾದ ಪದಾಧಿಕಾರಿಗಳಿಗೆ ಕೊಪ್ಪ ವಕೀಲರ ಸಂಘ ಆಭಿನಂದಿಸಿದೆ.

ಕಾವಾ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕ ಹುದ್ದೆಗಳು

ಚಿಕ್ಕಮಗಳೂರು, : ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆ 2026-27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅತಿಥಿ ಉಪನ್ಯಾಸಕ, ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲಿ ಇಚ್ಛಿಸುವ ಅಭ್ಯರ್ಥಿಗಳು ಗೌರವ ಸಂಭಾವನೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅನ್ವಯ ಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ (ಗ್ರಾಫಿಕ್ಸ್), ಛಾಯಾಚಿತ್ರ ಮತ್ತು ಛಾಯಾ ಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ ವಿಭಾಗದಲ್ಲಿ ಪ್ರಾಯೋಗಿಕ ಮತ್ತು ಥಿಯರಿ ಬೋಧನಾ ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸಕರ ಹುದ್ದೆಗೆ ಅಭ್ಯರ್ಥಿ ಗಳು ಅಂಗೀಕೃತ ವಿವಿಯಿಂದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. ಕನ್ನಡ, ಇಂಗ್ಲೀಷ್ ಭಾಷಾ ವಿಷಯಕ್ಕೆ ಅಂಗೀಕೃತ ವಿವಿಯಿಂದ ಕ್ರಮವಾಗಿ ಕನ್ನಡ (ಎಂಎ ಇನ್ ಕನ್ನಡ), ಇಂಗ್ಲೀಷ್ (ಎಂಎಇನ್ ಇಂಗ್ಲೀಷ್) ಹಾಗೂ ಹಿಂದಿ ಭಾಷಾ (ಎಂಎ ಇನ್ ಹಿಂದಿ)ಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಮೇ 15 (ಸಂಜೆ 5.30) ಅರ್ಜಿ ಸ್ವೀಕರಿಸಲು ಕೊನೆ ದಿನ. ಮೇ 19 ರಂದು ಬೆಳಿಗ್ಗೆ 11ಕ್ಕೆ ಸಂಸ್ಥೆಯಲ್ಲಿ ಸಂದರ್ಶನ ನಡೆಸಲಾಗುವುದು. ತರಗತಿಗಳು ಅನ್ವಯವಾಗುವಂತೆ ಕಾರ್ಯ ನಿರ್ವಹಿಸಲು ತಿಳಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಸರ್ಕಾರದ ಅಂತರ್ಜಾಲ ವಿಳಾಸ www.mysore.nic.in www.cavamysore.karnataka.gov.in ಮೂಲಕ ಮಾಹಿತಿ ಪಡೆದು. ಹೆಚ್ಚಿನ ಮಾಹಿತಿಗೆ ದೂ. ಸಂಖ್ಯೆ 0821-2438931 ಸಂಪರ್ಕಿಸಬಹುದು ಎಂದು ಕಾವಾದ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಡೂರು ತಾಲೂಕಿನ ಚಿಕ್ಕಪಟ್ಟಣಗೆರೆ ಗ್ರಾಮಸ್ಥರು ಸಮೃದ್ಧ ಮಳೆಗಾಗಿ ಮಳೆ ದೇವರು ಖ್ಯಾತಿಯ ಕಿಗ್ಗಾದ ಋಷ್ಯ ಶೃಂಗೇಶ್ವರ ಸ್ವಾಮಿಗೆ ಶತ ರುದ್ರಾಭಿಷೇಕ, ವಿಶೇಷ ಪೂಜೆ ನೆರವೇರಿಸಿದರು. ಚಿಕ್ಕಪಟ್ಟಣಗೆರೆ ನಾಗರಾಜ್, ಶಿವಮೂರ್ತಿ, ಸಿ.ಆರ್. ನಾಗರಾಜ್, ಸಿ.ಎಸ್. ರಮೇಶ್, ಶ್ರೀಧರ್, ಜಗದೀಶ್ ಇದ್ದರು.



ನರಸಿಂಹರಾಜಪುರದ ಸಿಂಸೆ ಸಹ್ಯಾದ್ರಿ ಸ್ನೇಹಿತರ ಬಳಗದ ಪದಗ್ರಹಣ ಸಮಾರಂಭದಲ್ಲಿ ಕಳೆದ ಸಾಲಿನ ಪದಾಧಿಕಾರಿಗಳನ್ನು ಗೌರವಿಸಲಾಯಿತು. ಜಿಪಂ ಮಾಜಿ ಉಪಾಧ್ಯಕ್ಷ ಪಿ.ಜೆ.ಆಂಟೋನಿ, ಎಂ.ಪಿ.ಸನ್ನಿ, ನಿರ್ಗಮಿತ ಅಧ್ಯಕ್ಷ ಬಿನು ವರ್ಗೀಸ್, ನೂತನ ಅಧ್ಯಕ್ಷ ಕೆ.ಜೆ.ರಜಿ ಮತ್ತಿತರರು ಇದ್ದರು.

ಸಂಘ ಸಂಸ್ಥೆ ಚಟುವಟಿಕೆ ಸಮಾಜಕ್ಕೆ ಪೂರಕವಾಗಿರಲಿ

ನರಸಿಂಹರಾಜಪುರ: ಸಂಘ ಸಂಸ್ಥೆಗಳ ಚಟುವಟಿಕೆಗಳು ಸಮಾಜಕ್ಕೆ ಪೂರಕವಾಗಿರಬೇಕು ಎಂದು ಜಿಪಂ ಮಾಜಿ ಉಪಾಧ್ಯಕ್ಷ ಪಿ.ಜೆ.ಆಂಟೋನಿ ತಿಳಿಸಿದರು. ಸಿಂಸೆಯಲ್ಲಿ ಸಹ್ಯಾದ್ರಿ ಬಳಗದ ವಾರ್ಷಿಕ ಸಭೆ- ಪದವಿ ಸ್ವೀಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ ಚಟುವಟಿಕೆ ಸೇವಾ ಮನೋಭಾವ ದಿಂದ ಕೂಡಿರ ಬೇಕು ಎಂದರು. ಎಂ.ಪಿ.ಸನ್ನಿ ಮಾತನಾಡಿ ಸಹ್ಯಾದ್ರಿ ಸ್ನೇಹಿತರ ಬಳಗ ಉತ್ತಮ ಕಾರ್ಯಕ್ರಮ ನಡೆಸುತ್ತಿದೆ. ಅಲ್ಲದೆ ತಾಲೂಕಿನ ಪ್ರಥಮ ಉಡನ್ ಷಟಲ್ ಕೋರ್ಟ್ ನಿರ್ಮಾಣ ಮಾಡಿದ ಕೀರ್ತಿ ಸಹ್ಯಾದ್ರಿ ಸ್ನೇಹಿತರ ಬಳಗಕ್ಕೆ ಸೇರುತ್ತದೆ ಎಂದರು. ಸಹ್ಯಾದ್ರಿ ಸ್ನೇಹಿತರ ಬಳಗದ ನಿರ್ಗಮಿತ ಅಧ್ಯಕ್ಷ ಬಿನು ವರ್ಗೀಸ್ ಹಾಗೂ ನೂತನ ಅಧ್ಯಕ್ಷ ಕೆ.ಜೆ. ರಜಿ ತಮ್ಮ ಅನಿಸಿಕೆವ್ಯಕ್ತಪಡಿಸಿದರು. ಇದೇಸಮಾರಂಭದಲ್ಲಿ ಪುಷ್ಪ ಆಸ್ಪತ್ರೆಯ ವೈದ್ಯೆ ಡಾ.ಮೇರಿ ಸೂಸನ್ನ, ಚಿಟ್ಟಿ ಕೊಡಿಗೆ ಬುದ್ದಿ ಮಾಂದ್ಯ ವಿಕಲ ಚೇತನ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಸ್ಟರ್‌ಲೂಕ, ಎಸ್‌ಎಸ್‌ಎಲ್ ಸಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿನಿ ಕೆ.ಎಸ್. ಆನ್ಲಿಯಾರನ್ನು ಗೌರವಿಸಲಾಯಿತು.

ಪಿ.ಸಿ.ಬಿನು, ಓ.ಜೆ.ವಿಜೇಶ್‌ಪಿ.ಪಿ.ಎಲ್ದೋ, ಕೆ.ಪಿ. ಶೋಭಿ, ಜೆರ್ರಿ, ಎಂ.ರಿತನ್, ಸುನೀಲ್, ಸಜಿ, ಕೆ.ಟಿ. ಬಿನು, ಅಂಬಟ್ಟಿ, ವಿಜೇಶ್, ಪ್ರಿನ್ಸಿ ಇದ್ದರು.

ದಲಿತರು ಸದೃಢರಾಗಲು ಆಶಿಸಿದ ಅಂಬೇಡ್ಕರ್

ಸೂಸಲವಾನಿಯಲ್ಲಿ ಡಾ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಡಿಎಸ್‌ಎಸ್ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್

• **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ದಲಿತ ಸಮುದಾಯದ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂಬುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಡಿ.ಎಸ್.ಎಸ್ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ತಿಳಿಸಿದರು.

ತಾಲೂಕಿನ ಸೂಸಲವಾನಿಯಲ್ಲಿ ಭಾನುವಾರ ನಡೆದ ತಾಲೂಕು ಮಟ್ಟದ ಡಾ.ಬಿ.ಆರ್‌ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಸರ್ಕಾರ ದಲಿತ ಸಮುದಾಯದವರಿಗಾಗಿ ಹಲವಾರು ಸೌಲಭ್ಯ ನೀಡುತ್ತಿದೆ. ಇದನ್ನು ಉಪಯೋಗಿಸಿಕೊಳ್ಳಬೇಕು. ದಲಿತ ಸಮುದಾಯದವರು, ಬಡವರು, ಶೋಷಿತ ವರ್ಗದವರು ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಅವರಿಗೆ ಮೇಲ್ವರ್ಗದ ಜನರಂತೆ ಎಲ್ಲಾ ಸವಲತ್ತುಗಳು ದೊರಕುವಂತಾಗಬೇಕು ಎಂದು ಅಂಬೇಡ್ಕರ್ ಶ್ರಮಿಸಿದ್ದರು. ಡಾ.ಅಂಬೇಡ್ಕರ್‌ನೀಡಿದಸಂವಿಧಾನ ಅತ್ಯಂತ ಶ್ರೇಷ್ಟವಾಗಿದೆ. ದಲಿತ ಸಮುದಾಯವರು ಆರ್ಥಿಕ, ಸಾಮಾಜಿಕ, ಧಾರ್ಮಿಕವಾಗಿ ಸದೃಢರಾಗಬೇಕೆಂದು ಹಲವಾರು ಯೋಜನೆಗಳನ್ನು ರೂಪಿಸಿದ್ದರು ಎಂದರು.



ನರಸಿಂಹರಾಜಪುರ ತಾಲೂಕಿನ ಸೂಸಲವಾನಿ ಗ್ರಾಮದಲ್ಲಿ ನಡೆದ ತಾಲೂಕು ಮಟ್ಟದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಡಿಎಸ್‌ಎಸ್ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್, ಜಿಲ್ಲಾ ಸಂಚಾಲಕ ಡಿ.ರಾಮು, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಪವಿತ್ರ ದೇವರಾಜ್ ಮತ್ತಿತರರು ಭಾಗವಹಿಸಿದ್ದರು.

ಸಭೆ ಅಧ್ಯಕ್ಷತೆ ವಹಿಸಿದ್ದ ಡಿ.ಎಸ್.ಎಸ್.ಜಿಲ್ಲಾ ಸಂಚಾಲಕ ಡಿ.ರಾಮು ಮಾತನಾಡಿ, ನಮ್ಮ ಸಮುದಾಯದ ಜನರಿಗೆ ಹಕ್ಕುಪತ್ರ, ಜಾತಿ ಪ್ರಮಾಣ ಪತ್ರಗಳನ್ನು ನೀಡುವಂತೆ ಎಷ್ಟು ಬಾರಿ ಅರ್ಜಿಗಳು ನೀಡಿದರೂ ಸಿಗುತ್ತಿಲ್ಲ ಹಾಗೂ ನಮ್ಮ ಜನರಿಗೆ ಸರ್ಕಾರದ ಸವಲತ್ತುಗಳು ಸಿಗುತ್ತಿಲ್ಲ. ಆದ್ದರಿಂದ ಮುಂದಿನ ತಿಂಗಳಲ್ಲಿ ದೊಡ್ಡಮಟ್ಟದ ಪ್ರತಿಭಟನೆ ಮಾಡಲು ನಮ್ಮ ಸಂಘಟನೆ ತೀರ್ಮಾನಿಸಿದೆ ಎಂದರು.

ಡಿಎಸ್‌ಎಸ್ ಜಿಲ್ಲಾ ಮಹಿಳಾ ಅಧ್ಯಕ್ಷೆ ಪವಿತ್ರ ದೇವರಾಜ್ ಮಾತನಾಡಿ, ಇಂದು ಭಾರತ ರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಭಾರತ ಮಾತ್ರವಲ್ಲದೆ ಸುಮಾರು 143ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಆಚರಿಸುತ್ತೇವೆ ಎಂದರೆ ಅಂಬೇಡ್ಕರ್‌ಅವರ ಸಾಧನೆಗೆ ಇಡೀ ಜಗತ್ತೇ ತಲೆಬಾಗಿದೆ ಎಂದರ್ಥವಾಗುತ್ತದೆ. ಪ್ರಪಂಚದಲ್ಲಿ ಅತಿಹೆಚ್ಚು ಪದವಿಗಳನ್ನು ಪಡೆದಿರುವ ವಿಶ್ವದ ಮೊದಲ ವ್ಯಕ್ತಿ ಅಂಬೇಡ್ಕರ್. ವಿದೇಶದಲ್ಲಿ ಪಿಎಚ್.ಡಿ ಮುಗಿಸಿ ಡಾಕ್ಟರೇಟ್ ಪಡೆದ ಮೊದಲ ಭಾರತೀಯರು. ಸಂವಿಧಾನವನ್ನು ರಚಿಸಿ ಕೋಟ್ಯಾಂತರ ಜನರ ಹಣೆಯ ಬರಹವನ್ನೇ ಬದಲಾಯಿಸಿದ ಮಹಾನ್ ಶಿಲ್ಪಿ ಡಾ.ಅಂಬೇಡ್ಕರ್ ರವರು ಎಂದರು.

ಅತಿಥಿಗಳಾಗಿ ಹಿರಿಯ ಮುಖಂಡ ವಾಸಪ್ಪ, ಸೂಸಲವಾನಿ ಗ್ರಾಮದ ಡಿ.ಎಸ್.ಎಸ್ ಸಂಚಾಲಕರಾದ ಸಿಜು, ವಿಜು, ನಾಗಲಾಪುರ ಗ್ರಾಮದ ಡಿ.ಎಸ್.ಎಸ್. ಕಾರ್ಯದರ್ಶಿ ಶಿವು, ಸಂಚಾಲಕ ಸುಧಾಕರ್, ರಾಗಿಣಿ, ಸುನಿತಾ ಇದ್ದರು.

‘ಬಿಎಸ್‌ವೈ ರಾಜಕೀಯಕ್ಕೆ 50 ವರ್ಷ ಸಂಭ್ರಮದ ಸಂಗತಿ’

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಮಾಜಿ ಮುಖ್ಯ ಮಂತ್ರಿ, ಬಿಜೆಪಿ ಕೇಂದ್ರೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಬದುಕಿನ 50 ವರ್ಷಗಳ ಅಭಿನಂದನಾ ಕಾರ್ಯಕ್ರಮವಾದ ಅಭಿಮಾನೋತ್ಸವ ಪೂರ್ವಭಾವಿ ಸಭೆ ಚಿಕ್ಕಮಗಳೂರಿನ ಜಿಲ್ಲಾ ಬಿಜೆಪಿ ಕಚೇರಿ ಪಾಂಚಜನ್ಯದಲ್ಲಿ ಭಾನುವಾರ ನಡೆಯಿತು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಡಾ.ಸಿ.ಟಿ.ರವಿ, ರಾಜ್ಯದಲ್ಲಿ ಪಕ್ಷಕ್ಕೆ ಗಟ್ಟಿ ನೆಲೆ ತಂದು ಕೊಟ್ಟವರು ಬಿಎಸ್‌ವೈ. ಅನಂತಕುಮಾರ್. ಯಡಿಯೂರಪ್ಪ ಹಾರ್ಡ್‌ವೇರ್, ಅನಂತ ಕುಮಾರ್ ಸಾಫ್ಟ್‌ವೇರ್‌ಆಗಿ ಪಕ್ಷ ಕಟ್ಟಿದ್ದಾರೆ. ಯಡಿಯೂರಪ್ಪ ರಾಜಕೀಯ ಬದುಕಿಗೆ 50ವರ್ಷ ತುಂಬಿರುವುದು ಎಲ್ಲರೂ ಸಂಭ್ರಮಿಸುವ ಸಂಗತಿ ಎಂದರು.

ರಾಜಕೀಯದಲ್ಲಿ ಅವರು ಅನೇಕ ಏಳುಬೀಳು ಎದುರಿಸಿದ್ದಾರೆ. ಯಡಿಯೂರಪ್ಪ ಎಂದರೆ ಶಕ್ತಿ. ನಾನು ಸೇರಿದಂತೆ ಅದೆಷ್ಟೋ ಕಾರ್ಯಕರ್ತರಿಗೆ ಪ್ರೇರಣಾ. ಮಾತೃ ಹೃದಯ ಅವರದು. ಪಕ್ಷಕ್ಕೆ ಅವರ ಕೊಡುಗೆ ದೊಡ್ಡದಿದೆ. ಅವರು ನಮ್ಮ ನಾಯಕರು. ಅವರನ್ನು ಅಭಿನಂದಿಸುವುದು ಪಕ್ಷದ ಸಂಘಟನೆಗೆ ದೊಡ್ಡ ಮಟ್ಟದಲ್ಲಿ ಸಹಕಾರಿ.ಎಲ್ಲರೂ ಸ್ವಯಂ ಪ್ರೇರಿತರಾಗಿ ಭಾಗವಹಿಸಬೇಕು ಎಂದು ಸಲಹೆ ಮಾಡಿದರು.



ಭಾನುವಾರ ಬಿಜೆಪಿ ಕಚೇರಿಯಲ್ಲಿ ನಡೆದ ಯಡಿಯೂರಪ್ಪ ಅವರ ಅಭಿಮಾನೋತ್ಸವ ಪೂರ್ವಭಾವಿ ಸಭೆ ವೇಳೆ ಅಭಿಮಾನೋತ್ಸವದ ಸ್ಟಿಕ್ಕರ್ ಬಿಡುಗಡೆ ಮಾಡಲಾಯಿತು.

ಮಾಜಿ ಶಾಸಕ ಹಾಗೂ ಅಭಿಮಾನೋತ್ಸವ ಸಮಿತಿ ಜಿಲ್ಲಾ ಸಂಚಾಲಕ ಬೆಳ್ಳಿಪ್ರಕಾಶ್ ಮಾತನಾಡಿ, ಕಡೂರಲ್ಲಿ ವಿವಿಧ ಮಹಾಶಕ್ತಿ ಕೇಂದ್ರಗಳಲ್ಲಿ ವಿವಿಧ ಹಂತಗಳಲ್ಲಿ ಸಭೆ ನಡೆಸಲಾಗಿದೆ. ಈಗಾಲೇ ಕಡೂರು ಕ್ಷೇತ್ರದಲ್ಲಿ 7 ಸಾವಿರ ಕಾರ್ಯಕರ್ತರು ಹೊರಡಲು ಸಿದ್ಧರಾಗಿದ್ದಾರೆ. ಈ ಉತ್ಸಾಹ ಎಲ್ಲರಲ್ಲಿ ಬರಬೇಕು ಎಂದು ಹೇಳಿದರು.

ಜನ ಶಕ್ತಿಯೇ ನಮಗೆ ಶಕ್ತಿ. ಇಚ್ಛಾಸಕ್ತಿ ಇದ್ದರೆ ನಮ್ಮ ಶಕ್ತಿ ಇಮ್ಮಡಿಯಾಗುತ್ತದೆ. ಅಭಿಮಾನೋತ್ಸವಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಸಹಕರಿಸಲು ಮನವಿ ಮಾಡಿದರು.

ಸಭೆ ಅಧ್ಯಕ್ಷತೆವಹಿಸಿದ್ದ ಬಿಜೆಪಿ ಜಿಲ್ಲಾ ಅಧ್ಯಕ್ಷ ಎಂ.ಆರ್.ದೇವರಾಜಶೆಟ್ಟಿ ಮಾತನಾಡಿ, ಚಿತ್ರದುರ್ಗದಲ್ಲಿ ನಡೆವ ಅಭಿಮಾನೋತ್ಸವದ ಲಾಭ ಪಕ್ಷ ಮತ್ತು ಸಾಮಾನ್ಯ ಕಾರ್ಯಕರ್ತರಿಗೆ ಆಗಲಿದೆ. ಅದೊಂದು ಅಪೂರ್ವ ಕಾರ್ಯಕ್ರಮ ಎಲ್ಲರೂ ಭಾಗವಹಿಸಬೇಕು ಎಂದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಲ್ಮರುಡಪ್ಪ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಪುಷ್ಪರಾಜ್, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ವಿಜಯ ಕುಮಾರ್ ಇತರರು ಇದ್ದರು.

ಎಲ್ಲರ ವಿಶ್ವಾಸಗಳಿಸಿ ಸೇವೆ ಸಲ್ಲಿಸಿದ ನ್ಯಾಯಾಧೀಶರು: ರಾಹುಲ್ ಶ್ಲಾಘನೆ



ತರೀಕೆರೆಯಲ್ಲಿ ಹಿರಿಯ ನ್ಯಾ. ವೈದ್ಯಶ್ರೀಕಾಂತ್ ಬೀಳ್ಕೊಡುಗೆ ಸಮಾರಂಭದಲ್ಲಿ ಅಡ್ವೊಕೇಟ್ ಅಸೋಸಿಯೇಶನ್ ಅಧ್ಯಕ್ಷ ಎಚ್.ಎಸ್.ಶಿವಶಂಕರನಾಯ್ಕ ಮತ್ತಿತರರು ಇದ್ದರು.

• **ಕನ್ನಡಪ್ರಭ ವಾರ್ತೆ** ತರೀಕೆರೆ

ಹಿರಿಯ ನ್ಯಾಯಾಧೀಶ ವೈದ್ಯಶ್ರೀಕಾಂತ್ ಬಹಳ ಉತ್ತಮ ರೀತಿಯಲ್ಲಿ ಎಲ್ಲರ ವಿಶ್ವಾಸ ಗಳಿಸಿಸೇವೆಸಲ್ಲಿಸಿವರ್ಗಾವಣೆಗೊಂಡಿದ್ದಾರೆ ಎಂದು ಸಿವಿಲ್ ನ್ಯಾಯಾಧೀಶ ರಾಹುಲ್ ಶೆಟ್ಟಿಗಾರ್‌ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 3 ವರ್ಷ ಸೇವೆ ಸಲ್ಲಿಸಿ ಜಮಖಂಡಿಗೆ ವರ್ಗಾವಣೆಯಾದ ನ್ಯಾ.ವೈದ್ಯಶ್ರೀಕಾಂತ್ ಅವರಿಗೆ ತರೀಕೆರೆ ಅಡ್ವೊಕೇಟ್ ಅಸೋಸಿಯೇಶನ್ ನಿಂದ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ ಮುಂದಿನ ದಿನಗಳಲ್ಲಿ ಒಟ್ಟಿಗೆ ಕೆಲಸ ನಿರ್ವಹಿಸುವ ಸೌಭಾಗ್ಯ ನಮ್ಮದಾಗಲಿ ಎಂದರು. ಹೆಚ್ಚುವರಿ ನ್ಯಾಯಾಧೀಶೆ ಊರ್ಮಿಳಾ ಮಾತನಾಡಿ ಸಹೋದರರಂತೆ ಮಾರ್ಗ ದರ್ಶನನೀಡುತ್ತಿದ್ದರು ಎಂದು ಹೇಳಿದರು.

ವಕೀಲ ಎಂ.ಕೆ.ತೇಜಮೂರ್ತಿ ಮಾತನಾಡಿ ಕಾನೂನು ಸಾಗರವಿದ್ದಂತೆ ವಕೀಲರು ಮತ್ತು ನ್ಯಾಯಾಧೀಶರು ಹೆಚ್ಚಿನ ಜ್ಞಾನ ಹೊಂದಿದ್ದು ನ್ಯಾಯವಿತರಣೆ ಮಾಡಬೇಕಾಗುತ್ತದೆ. ನ್ಯಾಯಾಧೀಶರು ಹೆಚ್ಚಿನ ಜ್ಞಾನ ಹೊಂದಿದ್ದರೆ, ಸಾರ್ವಜನಿಕರಿಗೆ ಹಾಗೂ ಕಕ್ಷಿದಾರರಿಗೆ ಅನುಕೂಲ. ಇಂತಹ ಜ್ಞಾನವನ್ನು ಹೊಂದಿರುವ ಹಿರಿಯ ನ್ಯಾಯಾಧೀಶರಾದ ವೈದ್ಯಶ್ರೀಕಾಂತ್ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದರು.

ಸಂಘದ ಉಪಾಧ್ಯಕ್ಷ ಎಸ್.ರಜನೀಶ್ ಮಾತನಾಡಿ ಬಾರ್‌ಮತ್ತು ಬೆಂಚ್ ನಡುವೆ ಸೌಹಾರ್ದತೆಯಿಂದ ಕೆಲಸ ನಿರ್ವಹಿಸಿದ್ದಾರೆ. ಶೀಘ್ರ ಅವರಿಗೆ ಹೆಚ್ಚಿನ ಮುಂಬಡ್ತಿ ದೊರಯಲಿ ಎಂದು ಆಶಿಸಿದರು.

ವಕೀಲ ಕೆ.ಜಂದ್ರಪ್ಪ, ವಕೀಲ ಬಿ.ಪಿ. ವಿಕಾಸ್, ಎಚ್.ಎಸ್.ಶಿವಶಂಕರ ನಾಯ್ಕ ಅಮರನಾಥ್, ಎ.ನವೀನ್, ವಕೀಲರಾದ ಎಸ್.ಸುರೇಶ್ ಚಂದ್ರ, ವಸಂತ್, ಶ್ರೀನಿವಾಸ್, ಪ್ರಭುಲಿಂಗ, ಟಿ.ಎಂ.ರಾಜು, ಸುಮಂತ್, ವೀಣಾ ಭಾಗವಹಿಸಿದ್ದರು.

ಪಿಯು ಮರು ಮೌಲ್ಯಮಾಪನ: ಬೆನಿಟ್‌ಗೆ ತಾಲೂಕಿಗೆ ದ್ವಿತೀಯ ಸ್ಥಾನ

ಶಿಕ್ಷಣದಲ್ಲಿ ಅವಳಿ ಸಹೋದರಿಯರ ಯಶೋಗಾಥೆ | ಮೆಡಿಕಲ್, ಎಂಜಿನಿಯರಿಂಗ್ ಓದುವ ಅಭಿಲಾಷೆ

• **ಯಡಗೆರೆ ಮಂಜುನಾಥ್**
• **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಪಟ್ಟಣದ ಎಂಕೆಸಿಪಿಎಂ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಅವಳಿ ಸಹೋದರಿಯರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಇಬ್ಬರು ಸಹೋದರಿಯರ ಅಂಕಗಳು ಮರು ಮೌಲ್ಯ ಮಾಪನದ ನಂತರ ಹೆಚ್ಚಾಗಿ ಓರ್ವ ವಿದ್ಯಾರ್ಥಿನಿ ತಾಲೂಕಿಗೆ ದ್ವಿತೀಯ ಸ್ಥಾನ ಗಳಿಸಿದ್ದಾಳೆ.

ಮೆಣಸೂರು ಗ್ರಾಪಂನ ಬಡಗಬೈಲು ಗ್ರಾಮದ ದಾಸನ ಗದ್ದೆಯ ಕೃಷಿ ಕುಟುಂಬದ ಬೇಬಿ ಹಾಗೂ ಜೋಸಿ ದಂಪತಿ ಅವಳಿ ಪುತ್ರಿಯರಾದ ಬೆನಿಟ್ ಹಾಗೂ ಬ್ರಿಟ್ಟಾ ಪಟ್ಟಣದ ಎಂಕೆಸಿಪಿಎಂ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಈ ವರ್ಷ ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ ಬೆನಿಟ್ 577 ಅಂಕ ಪಡೆದಿದ್ದಳು.



ಇಂಗ್ಲೀಷ್‌ನಲ್ಲಿ ಅಂಕ ಕಡಿಮೆಯಾಗಿದೆ ಎಂದು ಮರು ಮೌಲ್ಯ ಮಾಪನಕ್ಕೆ ಅರ್ಜಿ ಸಲ್ಲಿಸಿದ್ದಳು. ಮರು ಮೌಲ್ಯ ಮಾಪನದ ನಂತರ ಬೆನಿಟ್‌ಗೆ 9 ಅಂಕಗಳು ಹೆಚ್ಚಾದರೆ ಒಟ್ಟು 586 (ಶೇ 97.6) ಅಂಕಗಳು ದೊರೆತು ತಾಲೂಕಿಗೆ ದ್ವಿತೀಯ ಸ್ಥಾನಗಳಿಸಿದ್ದಾಳೆ.

ಇನ್ನೊಬ್ಬ ಸಹೋದರಿ ಬ್ರಿಟ್ಟಾಗೆ ಈ ಮೊದಲು 578 ಅಂಕ ಬಂದಿದ್ದು ಮರು ಮೌಲ್ಯ ಮಾಪನದಲ್ಲಿ ಹೆಚ್ಚುವರಿಯಾಗಿ 2 ಅಂಕ ಸಿಕ್ಕಿರುವುದರಿಂದ ಈಗ ಅವಳು ಒಟ್ಟು 580(ಶೇ 96.6) ಅಂಕ ಗಳಿಸಿದಂತಾಗಿದೆ. ಈ ಅವಳಿ ಸಹೋದರಿಯರು ಎಲ್‌ಕೆಜಿಯಿಂದ ಎಸ್‌ಎಸ್ ಎಲ್‌ಸಿ ವರೆಗೆ ಕೊಪ್ಪದ ಸಂತ ನಾಬರ್ಟ್ ಶಾಲೆಯಲ್ಲಿ ಶಿಕ್ಷಣ ಪಡೆದು ಪ್ರತಿವರ್ಷ ಇಬ್ಬರೂ ಸಮನಾಗಿ ಉತ್ತಮ ಅಂಕ ಗಳಿಸುತ್ತಾ ಬಂದಿದ್ದಾರೆ. ಎಸ್‌ಎಸ್‌ಎಲ್‌ಸಿಯಲ್ಲಿ (ಸಿಬಿಎಸ್ಸಿ) ಬೆನಿಟ್-ಬ್ರಿಟ್ಟಾ ಶೇ 90 ರಷ್ಟು ಗಳಿಸಿದ್ದರು. ಮುಂದೆ ಬೆನಿಟ್ ಎಂಜಿನಿಯರಿಂಗ್ ಮಾಡುವ ಆಸೆ ಹೊಂದಿದ್ದರೆ, ಬ್ರಿಟ್ಟಾ ಮೆಡಿಕಲ್ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾಳೆ. ಇಬ್ಬರೂ ಸಿಇಟಿ ಪರೀಕ್ಷೆ ಬರೆದಿದ್ದು ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ. ಅವಳಿ ಸಹೋದರಿಯರಿಗೆಕಾಲೇಜಿನಪ್ರಾಂಶುಪಾಲೆಪದ್ಮರಮೇಶ್, ಆಡಳಿತ ಮಂಡಳಿ, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಜಾತ್ರೆ, ಉತ್ಸವ ಜನರ ಒಗ್ಗೂಡಿಸಿ ಸಮಾಜದಲ್ಲಿ ಸಾಮರಸ್ಯ ಬೆಳೆಸುತ್ತವೆ

ಆಶಾಕಿರಣ ಶಾಲೆ ಅಧ್ಯಕ್ಷ ಡಾ.ಜೆ.ಪಿ. ಕೃಷ್ಣೇಗೌಡ



ಆಶಾಕಿರಣ ಅಂಧ ಮಕ್ಕಳ ಶಾಲೆ ಅಧ್ಯಕ್ಷ ಡಾ.ಕೃಷ್ಣೇಗೌಡ ಕಾರ್ಯಕ್ರಮ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಹಬ್ಬ, ಹರಿ ದಿನಗಳು, ಜಾತ್ರೆ, ಉತ್ಸವಗಳು ಜನರನ್ನು ಒಗ್ಗೂಡಿಸಿ ಸಮಾಜದಲ್ಲಿ ಸಾಮರಸ್ಯ ಬೆಳೆಸುತ್ತವೆ ಎಂದು ಆಶಾಕಿರಣ ಅಂಧ ಮಕ್ಕಳ ಶಾಲೆ ಅಧ್ಯಕ್ಷ ಡಾ.ಜೆ.ಪಿ. ಕೃಷ್ಣೇಗೌಡ ಹೇಳಿದರು.

ತಾಲೂಕಿನ ಬೆಳವಾಡಿ ಗ್ರಾಮ ದೇವತೆ ಶ್ರೀ ಕರಿಯಮ್ಮ ದೇವಿ ಮತ್ತು ಬಿಂದಿಗೆಮ್ಮ ದೇವಿಯವರ ಬಂಡಿ ಬಾನೋತ್ಸವ ಹಾಗೂ ಸಿಡಿ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಹಬ್ಬ ಹರಿದಿನಗಳು, ಜಾತ್ರೆ, ಉತ್ಸವಗಳಲ್ಲಿ ಎಲ್ಲರೂ ಒಗ್ಗೂಡಿ ಪಾಲ್ಗೊಳ್ಳುವುದರಿಂದ ಭಾವೈಕ್ಯತೆ ಸಾಧಿಸಲು ಸಾಧ್ಯವಾಗುತ್ತದೆ. ಪರಸ್ಪರ ವೈಷಮ್ಯ ಮರೆತು ಒಂದಾಗಿ ಬಾಳಲು ಸಹಕಾರಿಯಾಗುತ್ತದೆ. ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಮನುಷ್ಯನ ವ್ಯಕ್ತಿತ್ವ ವಿಕಸಗೊಳಿಸುತ್ತದೆ. ನಾಗರಿಕತೆಕಲಿಸುತ್ತದೆ, ಸ್ವಾಸ್ಥ ಸಮಾಜವನ್ನು ನಿರ್ಮಾಣ ಮಾಡುತ್ತದೆ, ಜಾನಪದ ನಮ್ಮ ಮೂಲ ಬೇರು, ನಮ್ಮ ಅಸ್ತಿತ್ವವಿರುವುದೇ ಜಾನಪದದಲ್ಲಿ ಎಂದ ಅವರು ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿರುವ ಜಾನಪದ ಕಳೆದುಕೊಂಡರೆ ಜಗತ್ತಿನೆದುರು ನಾವು ಒಂಟಿಯಾಗಿ ನಿಲ್ಲಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಜಿ.ಬಿ.ಸುರೇಶ್ ಮಾತನಾಡಿ, ಭಾರತೀಯ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಜಾನಪದದ ಕೊಡುಗೆ ಅಪಾರ. ಜಗತ್ತಿನ ಎಲ್ಲಾ ಕಲೆಗಳಿಗೂ ಜಾನಪದವೇ ತಾಯಿ ಬೇರಾಗಿದೆ, ಗ್ರಾಮೀಣರು ಮತ್ತು ಮಹಿಳೆಯರಿಂದಾಗಿ ಜಾನಪದ ಆಧುನಿಕತೆ ಅಬ್ಬರದ ನಡುವೆಯೂ ಉಳಿದು ಬಂದಿದೆ. ಮುಂದೂ ಸಹ ಅವರಿಂದಲೇ ಉಳಿಯಬೇಕಾಗಿದೆ ಎಂದರು.

ಗ್ರಾಮದ ಹಿರಿಯ ಜಾನಪದ ಕಲಾವಿದರನ್ನು ಗೌರವಿಸಲಾಯಿತು. ಶ್ರೀ ಬಸವೇಶ್ವರ ಭಜನಾ ಮಂಡಳಿ ಅಧ್ಯಕ್ಷ ಪರಮೇಶ್ವರಪ್ಪ, ಗ್ರಾಪಂ ಅಧ್ಯಕ್ಷೆ ಸಿರಾಜ್ ಉನ್ನೀಸಾ, ಶಂಕರೇಗೌಡ, ಮರುಳಸಿದ್ದಯ್ಯ, ಬೆಳವಾಡಿ ಪ್ರಕಾಶ್, ಶಂಕರಯ್ಯ ಮೊದಲಾದವರಿದ್ದರು.

ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿ | ನಿವೃತ್ತ ಮುಖ್ಯಾಧಿಕಾರಿ ಜಿ.ಪ್ರಕಾಶ್‌ಗೆ ಬೀರೂರು ಪುರಸಭೆಯಲ್ಲಿ ಬೀಳ್ಕೊಡುಗೆ ಸಮಾರಂಭ

ಗಳಿಸಿದ ಹಣಕ್ಕಿಂತ ಸಂಪಾದಿಸಿದ ಪ್ರೀತಿ ಶ್ರೇಷ್ಠ : ಬಿ.ಕೆ. ಶಶಿಧರ್

• **ಕನ್ನಡಪ್ರಭ ವಾರ್ತೆ** ಬೀರೂರು

ಅಧಿಕಾರಿ ಮತ್ತು ನೌಕರರು ಸೇವಾವಧಿಯಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೇ ಜನರ ಮೆಚ್ಚುಗೆ ಗಳಿಸಬಹುದೆಂದು ಪುರಸಭೆ ಮಾಜಿ ಅಧ್ಯಕ್ಷ ಬಿ.ಕೆ.ಶಶಿಧರ್‌ಹೇಳಿದರು.

ಪುರಸಭೆಯಲ್ಲಿ ನಿವೃತ್ತ ಮುಖ್ಯಾಧಿಕಾರಿ ಜಿ.ಪ್ರಕಾಶ್‌ಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ ಅಧಿಕಾರವಿದ್ದಾಗ ಗಳಿಸುವ ಹಣಕ್ಕಿಂತ ಸಂಪಾದಿಸಿದ ಜನರ ಪ್ರೀತಿ, ವಿಶ್ವಾಸ, ಕೀರ್ತಿ ಸದಾ ನಮ್ಮ ಜೊತೆ ಇರುತ್ತದೆ. ಸರ್ಕಾರಿ ನೌಕರರಿಗೆ ನಿವೃತ್ತಿ ಕಟ್ಟಿಟ್ಟ ಬುತ್ತಿ. ನಿವೃತ್ತ ಜೀವನವನ್ನು ಆರೋಗ್ಯಕ್ಕೆ ಒತ್ತು ನೀಡುವ ಮೂಲಕ ಕಳೆಯಬೇಕು. ಕರ್ತವ್ಯದ ಲ್ಲಿದ್ದಾಗ ಪ್ರತಿ ದಿನ ಚಟುವಟಿಕೆ ಬದುಕು ನಡೆಯುತ್ತಿರುತ್ತದೆ. ನಿವೃತ್ತಿ ನಂತರ ಚಟುವಟಿಕೆಯಿಲ್ಲದೆ ಅನಾರೋಗ್ಯ ಉಂಟಾಗಬಹುದು. ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೆ ಒಳಗಾಗುವುದು ಒಳಿತು ಎಂದರು.

ಆಶ್ರಯ ಕಮಿಟಿ ಸದಸ್ಯ ಮುಬಾರಕ್ ಮಾತನಾಡಿ ಹಲವು ವರ್ಷಗಳಿಂದ ಬೀರೂರು ಪುರಸಭೆಯಲ್ಲಿ ಎಸ್‌ಡಿಎ, ಎಫ್‌ಡಿಎ, ವ್ಯವಸ್ಥಾಪಕರಾಗಿ ಪಟ್ಟಣದ ಜನರ ಅರಿತು ಪ್ರಾಮಾಣಿಕ ಕೆಲಸದ ಮೂಲಕ ಪಟ್ಟಣದ ಜನರ ಮನಗೆದ್ದಿದ್ದಾರೆ ಎಂದರು.

ಪುರಸಭೆ ಮಾಜಿ ಸದಸ್ಯ ಬಿ.ಎಂ.ರುದ್ರಪ್ಪ ಮಾತನಾಡಿ, ಬಡವರ ಕಷ್ಟಕ್ಕೆ ಸ್ಪಂದಿಸುವ ಕಾರ್ಯ ಸರ್ಕಾರಿ ಅಧಿಕಾರಿ ಮಾಡಬೇಕು. ಸಿಕ್ಕಂತಹ ಅಮೂಲ್ಯ ಅವಧಿಯಲ್ಲಿ ಬಡವರಿಗೆ ಸ್ಪಂದಿಸಿ ಕಾರ್ಯನಿರ್ವಹಿಸಿದ್ದಾರೆ ಎಂದರು.

ಆಶ್ರಯ ಕಮಿಟಿ ಇನ್ನೋರ್ವ ಸದಸ್ಯ ಬಿ.ಟಿ. ಚಂದ್ರಶೇಖರ್‌ಮಾತನಾಡಿ, ಸರ್ಕಾರಿ ನೌಕರಿ ಪಡೆದವರು ಸಾರ್ವಜ ನಿಕರ ಸೇವೆಗೆ ಹೆಚ್ಚು ಸಮಯ ನೀಡಬೇಕು. ಇಲಾಖೆ ವ್ಯಾಪ್ತಿಯಲ್ಲಿ ಸಿಗುವ ಸೌಲಭ್ಯ ಬಡ ಜನರಿಗೆ ನೀಡಿ ಅವರ ಸಮಸ್ಯೆ ಬಗೆಹರಿಸಬೇಕು. ಸರ್ಕಾರಿ ಅಧಿಕಾರಿಗೆ ನಿವೃತ್ತಿ ಅನಿವಾರ್ಯ. ನಿವೃತ್ತಿಗೂ ಮುನ್ನ ಆ ಅಧಿಕಾರಿ ನಿರ್ವಹಿಸಿದ ಕರ್ತವ್ಯ ಪ್ರಾಮುಖ್ಯತೆ ಪಡೆದಿದೆ. ಚುನಾಯಿತ ಪ್ರತಿನಿಧಿ, ಸಿಬ್ಬಂದಿ ಹಾಗೂ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುವ ಕಾರ್ಯ ಮುಖ್ಯಾಧಿಕಾರಿ ಪ್ರಕಾಶ್ ಮಾಡಿದ್ದರು ಎಂದು ಮೆಲುಕು ಹಾಕಿದರು.



ಬೀರೂರಿನ ಪುರಸಭೆಯಲ್ಲಿ ನಿವೃತ್ತ ಮುಖ್ಯಾಧಿಕಾರಿ ಜಿ.ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು. ಕಂದಾಯಧಿಕಾರಿ ಮಂಜುನಾಥ್, ಲಕ್ಷ್ಮಣ್, ಜಯಮ್ಮ ಸೇರಿದಂತೆ ಮತ್ತಿತರಿದ್ದರು.

ಗೌರವ ಸ್ವೀಕರಿಸಿ ಮಾತನಾಡಿದ ನಿವೃತ್ತ ಮುಖ್ಯಾಧಿಕಾರಿ ಜಿ.ಪ್ರಕಾಶ್, ಆತ್ಮೀಯತೆ ವಿಶ್ವಾಸದಿಂದ ಮಾತ್ರ ಸಮಾಜದಲ್ಲಿ ಎಲ್ಲರನ್ನು ಗೆಲ್ಲಲು ಸಾಧ್ಯ. ಸೇವೆಗೆ ಸೇರಿದ ದಿನದಿಂದಲು ಈ ವೃತ್ತಿ ನನಗೆ ಆತ್ಮತೃಪ್ತಿ ತಂದಿದೆ. ಸರ್ಕಾರಿ ನೌಕರರು ಮೊದಲು ಸಮಯ ಪಾಲನೆ ಕಲಿಯಬೇಕು. ಕಚೇರಿಗೆ ಆಗಮಿಸುವ ಸಾರ್ವಜನಿಕರೊಂದಿಗೆ ಪ್ರೀತಿಯಿಂದ ವರ್ತಿಸಿ ಅವರ ಸಮಸ್ಯೆ ಬಗೆಹರಿಸುವತ್ತ ಚಿತ್ತ ಹರಿಸಬೇಕು. ಸಾರ್ವಜನಿಕರನ್ನು ಕೆಲಸ ಮಾಡದೆ ಅಲೆದಾಡಿಸುವುದು ಇಡೀ ಕಚೇರಿ ಗೌರವ ಕುಂದಿಸುತ್ತದೆ. ಉತ್ತಮ ಕಾರ್ಯನಿರ್ವಹಿಸಲು ಸಹಕರಿಸಿದ ಶಾಸಕರು, ಸಿಬ್ಬಂದಿಗೆ ಧನ್ಯವಾದ ತಿಳಿಸಿದರು.

ಪುರಸಭೆ ಪೌರ ನೌಕರರ ಸಂಘದ ಅಧ್ಯಕ್ಷೆ ಜಯಮ್ಮ, ಮಲ್ಲಿಕಾರ್ಜುನ್ ಮಾತನಾಡಿದರು. ಕಂದಾಯ ಅಧಿಕಾರಿ ಮಂಜುನಾಥ್, ಹಿರಿಯ ಆರೋಗ್ಯ ನಿರೀಕ್ಷಕ ವೈ.ಎಂ. ಲಕ್ಷ್ಮಣ್, ರೇಣುಕಮ್ಮ, ಶಿಲ್ಪ, ವೀಣಾ, ಪ್ರದೀಪ್, ಲಿಂಗರಾಜು, ಕರಿಯಪ್ಪ, ಪುರಸಭೆ ಪೌರ ಕಾರ್ಮಿಕರು, ನೀರುಗಂಟಿಗಳು ಹಾಗೂ ಸಾರ್ವಜನಿಕರು ಇದ್ದರು.